**Code No. 20 Y**

### ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ — ಪ್ರಥಮ ದರ್ಜೆ — ದ್ವಿತೀಯ ಪತ್ರಿಕೆ

# (ಸೂತ್ರಗಳು)

ಜೂನ್, 2016

ಸಮಯ : 1 ಗಂಟೆ 30 ನಿಮಿಷಗಳು

ಅಂಕಗಳು : 100

***ಸೂಚನೆ :*** ಉತ್ತರಗಳು ಸಂಕ್ಷಿಪ್ತ ಹಾಗೂ ಸಮಂಜಸವಾಗಿರಬೇಕು.

1. ಆದಿಯಲ್ಲಿ ಸಣ್ಣ ಕೊಕ್ಕೆಗಳನ್ನು ಉಪಯೋಗಿಸುವ ವಿಧಾನವನ್ನು ಬರೆಯಿರಿ. 10

2. ಶೀಘ್ರಲಿಪಿಯಲ್ಲಿ ದೊಡ್ಡ ವೃತ್ತಗಳ ಉಪಯೋಗವನ್ನು ವಿವರಿಸಿ. 10

3. ದ್ವಿರೂಪ ವರ್, ತರ್, ದರ್ ಉದಾಹರಣೆ ಸಹಿತ ವಿವರಿಸಿ. 10

4. ಈ ಕೆಳಗಿನವುಗಳಲ್ಲಿ ಯಾವುದಾದರೂ **ನಾಲ್ಕಕ್ಕೆ** ಟಿಪ್ಪಣಿ ಬರೆಯಿರಿ : 4 × 5 = 20

   ಅ) ಅರ್ಧ ವೃತ್ತಗಳು

   ಆ) ಊರ್ಧ್ವಮುಖ 'ರ'

   ಇ) ಓರೆಗೆರ 'ಹ' ಮತ್ತು ಚುಕ್ಕೆ 'ಹ'

   ಈ) ಸಣ್ಣ ವೃತ್ತಗಳ ಅಂತ್ಯಪ್ರತ್ಯಯಗಳು

   ಉ) ಸ್ತ್ರ ಅಥವಾ ಷ್ಟ್ರ ದೊಡ್ಡ ಕುಣಿಕೆ

5. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಐದು*** ಪದಗಳಿಗೆ ಸಂಕ್ಷೇಪಣೆ ಬರೆಯಿರಿ : 5 × 1 = 5

   ಅ) ಪ್ರಭುತ್ವ

   ಆ) ಮಠಾಧಿಪತಿ

   ಇ) ಮೈಸೂರು ಸಂಸ್ಥಾನ

   ಈ) ವರ್ಣಾಶ್ರಮ ಧರ್ಮ

   ಉ) ಜನರಲ್ ಆಸ್ಪತ್ರೆ

   ಊ) ದುಷ್ಪರಿಣಾಮ

[ Turn over

6. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಐದಕ್ಕೆ*** ಛೇದಿಸುವಿಕೆ ಪದಗಳನ್ನು ಬರೆಯಿರಿ : 5 × 1 = 5

   ಅ) ಇರಲಿ ಇಲ್ಲದಿರಲಿ

   ಆ) ಕೋಮುವಾರು ಭಾವನೆ

   ಇ) ಗ್ರಾಮ ಪುನರುಜ್ಜೀವನ

   ಈ) ಕೆಳದರ್ಜೆ ನೌಕರರು

   ಉ) ಒಂದು ಕಡೆಯಿಂದ ಮತ್ತೊಂದು ಕಡೆಗೆ

   ಊ) ಭಾರತೀಯ ಸಂವಿಧಾನ

7. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಐದಕ್ಕೆ*** ಪದಗಳ ಸಮೂಹ ಬರೆಯಿರಿ : 5 × 1 = 5

   ಅ) ಎಕ್ಸೈಸ್ ಕಮಿಷನರ್

   ಆ) ಕಲಾಕೌಶಲ್ಯ

   ಇ) ಆಧುನಿಕ ಸಂಚಾರ ಸೌಲಭ್ಯಗಳು

   ಈ) ಅನುಕೂಲ ಪ್ರತಿಕೂಲ

   ಉ) ಕನ್ನಡ ಪ್ರದೇಶ

   ಊ) ದಿನದಿನಕ್ಕೂ

8. ಈ ಕೆಳಗಿನ ಖಾಲಿ ಜಾಗಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿ : 5 × 1 = 5

   ಅ) 'ಲ' ರೇಖಾಕ್ಷರವನ್ನು ಅಧೋಮುಖವಾಗಿ ದಪ್ಪ ಮಾಡಿ ಬರೆದರೆ 'ಲ' ಜೊತೆ ...................... ಸಂಯೋಗವನ್ನು ಸೂಚಿಸುತ್ತದೆ.

   ಆ) ಒಂದು ಸಣ್ಣ ವೃತ್ತವನ್ನು ರೇಖಾಕ್ಷರದ ಮಧ್ಯದಲ್ಲಿ ಬಿಡಿಸಿ ಬರೆದರೆ ...................... ಪ್ರತ್ಯಯ ಸೂಚಿಸುತ್ತದೆ.

   ಇ) ಮಧ್ಯದಲ್ಲಿ ಚುಕ್ಕೆ ಇಟ್ಟು ದೊಡ್ಡ ವೃತ್ತವನ್ನು ರೇಖಾಕ್ಷರದ ಅಂತ್ಯದಲ್ಲಿ ಬಿಡಿಸಿ ಬರೆದರೆ ......................... ......................... ಅಂತ್ಯ ಪ್ರತ್ಯಯವನ್ನು ಸೂಚಿಸುತ್ತದೆ.

   ಈ) ಪೂರ್ಣ ವಿರಾಮ ಚಿಹ್ನೆಯನ್ನು ...................... ಗುರುತಿನಿಂದ ಸೂಚಿಸುತ್ತಾರೆ.

   ಉ) ಅಂತ್ಯದಲ್ಲಿ 'ಇ' ಸ್ವರದಿಂದ ಕೂಡಿದ 'ಲ' ರೇಖಾಕ್ಷರವನ್ನು ಸೇರಿಸಿ ಅಥವಾ ಬಿಡಿಸಿ ಬರೆದಲ್ಲಿ ...................... ಸಪ್ತಮಿ ವಿಭಕ್ತಿ ಪ್ರತ್ಯಯವನ್ನು ಸೂಚಿಸುತ್ತದೆ.

9. ಈ ಕೆಳಗೆ ಕೊಟ್ಟಿರುವ ವಿಷಯವನ್ನು ಶೀಘ್ರಲಿಪಿಯಲ್ಲಿ ಅಗತ್ಯವಿರುವ ಕಡೆ ಸ್ವರಚಿಹ್ನೆಗಳನ್ನು ಉಪಯೋಗಿಸಿ ಬರೆಯಿರಿ : 30

ಮಾನ್ಯರೇ, ನಮ್ಮ ಇಲಾಖೆಯು ನಡೆಸುತ್ತಿರುವ ವಿವಿಧ ಸರ್ಕಾರಿ ಕಾಲೇಜುಗಳಿಗೆ ಒಂದು ಸಾವಿರ ಡೆಸ್ಕುಗಳನ್ನು ಸರಬರಾಜು ಮಾಡಲು ನಿಮಗೆ ಆದೇಶ ಕೊಟ್ಟು ಮೂರು ತಿಂಗಳು ಗತಿಸಿ ಹೋದವು. ಆದರೆ ಅವುಗಳನ್ನು ನೀವು ಇನ್ನೂ ಸರಬರಾಜು ಮಾಡಲಿಲ್ಲ. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ, ಬೆಂಗಳೂರು ಇವರಿಂದ ನಿಗದಿ ಮಾಡಲ್ಪಟ್ಟ ದರ ಪಟ್ಟಿಯ ಪ್ರಕಾರ ಡೆಸ್ಕುಗಳನ್ನು ಆದೇಶ ನೀಡಿದ ಒಂದು ತಿಂಗಳೊಳಗಾಗಿ ಸರಬರಾಜು ಮಾಡಬೇಕೆಂದು ಷರತ್ತು ಇರುವುದನ್ನು ತಾವು ಗಮನಿಸಿದಂತೆ ತೋರುವುದಿಲ್ಲ. ಆದ್ದರಿಂದ ಸದರಿ ನಿಯಮ ಮತ್ತು ಷರತ್ತುಗಳಿಗೆ ಅನುಗುಣವಾಗಿ, ತಡವಾಗಿ ಸರಬರಾಜು ಮಾಡಿದ ಬಿಲ್ಲುಗಳಲ್ಲಿ ಶೇಕಡವಾರು ಹಣವನ್ನು ಕಡಿತ ಮಾಡಬೇಕಾಗುವುದು.

ಮೇಲಿನ ಆದೇಶದಲ್ಲಿ ಹೊಸದಾಗಿ ಪ್ರಾರಂಭಿಸಲ್ಪಟ್ಟ ಕೆಲವು ಕಾಲೇಜುಗಳ ಹೆಸರು ಸೇರಿದ್ದು, ಅವುಗಳಿಗೆ ಡೆಸ್ಕುಗಳನ್ನು ಸರಬರಾಜು ಮಾಡದ ಹೊರತು ಕಾಲೇಜುಗಳನ್ನು ತೆರೆಯುವಂತಿಲ್ಲ ಹಾಗೂ ಪ್ರಾಚಾರ್ಯರು ಡೆಸ್ಕುಗಳ ಅವಶ್ಯಕತೆ ಬಗ್ಗೆ ಬಹಳ ಒತ್ತಾಯಿಸಿರುವುದರಿಂದಲೂ ಮತ್ತು ವಿದ್ಯಾರ್ಥಿಗಳ ಕಿರುಕುಳ ಬಹಳವಾಗಿರುವುದರಿಂದಲೂ ಈ ಡೆಸ್ಕುಗಳ ಅವಶ್ಯಕತೆಯ ಬಗ್ಗೆ ತಮಗೆ ಹೆಚ್ಚಿಗೆ ಬರೆಯಬೇಕಾಗಿಲ್ಲ. ನೀವು ಇವುಗಳನ್ನು ತಕ್ಷಣವೇ ಸರಬರಾಜು ಮಾಡದಿದ್ದಲ್ಲಿ ಕಾಲೇಜನ್ನು ಪ್ರಾರಂಭಿಸಲು ಕಷ್ಟವಾಗುತ್ತದೆ. ಒಂದು ವೇಳೆ ನಿಮಗೆ ಸರಬರಾಜು ಮಾಡಲು ಸಾಧ್ಯವಿಲ್ಲದಿದ್ದ ಪಕ್ಷದಲ್ಲಿ ನಮಗೆ ಮರು ಟಪಾಲಿನಲ್ಲಿ ತಿಳಿಸಲು ಕೋರಿದೆ. ಈ ಪತ್ರ ತಲುಪಿದ ಒಂದು ವಾರದೊಳಗೆ ನಿಮ್ಮಿಂದ ಉತ್ತರ ಬಾರದಿದ್ದಲ್ಲಿ ನಾವು ಈ ಆದೇಶವನ್ನು ಅನಿವಾರ್ಯವಾಗಿ ರದ್ದುಪಡಿಸಬೇಕಾಗುತ್ತದೆ. ತಮ್ಮ ವಿಶ್ವಾಸಿ, ನಿರ್ದೇಶಕರು.